**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 96/2020**

**ಚಾ.ಸಾಃ 3, ಪ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಮಹ್ಮದ್ ಸಿಕಂದರ್ |
| ತಂದೆಯ ಹೆಸರು | ಆಲಿ ಸಾಬ್ |
| ವಯಸ್ಸು | 68 ವರ್ಷಗಳು |
| ಉದ್ಯೋಗ | ನಿವೃತ್ತ ಜೀವನ |
| ವಾಸ್ತವ್ಯ | ಚಂದಾವರ |

**ಸಾಕ್ಷಿಯನ್ನು ದಿನಾಂಕಃ 08-12-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-2 ಗುನ್ಹೆ ಜಾಗೆ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ಸಾಕ್ಷಿ ತನ್ನದು ಎಂದು ತಿಳಿಸಿದ್ದರಿಂದ ನಿಪಿ-2ರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸದರಿ ನಿಪಿ-2ರ ಮೇಲಿನ ಸಹಿಯನ್ನು ನಾನು ದಿನಾಂಕ 01-10-2019ರಂದು ಚಾಸಾ-1ರವರ ಮನೆಯಲ್ಲಿ ಕಳ್ಳತನವಾಗಿದ್ದಕ್ಕೆ ಸಂಬಂಧಿದಂತೆ ಪೋಲಿಸರು ಬಂದಾಗ ಮಾಡಿರುತ್ತೇನೆ. ಸ್ಥಳಕ್ಕೆ ಪೋಲಿಸರು ಬಂದಿದ್ದರು. ಸಹಿ ಮಾಡಿದ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-2 ಹಾಜರಿದ್ದರು. ಕಳ್ಳತನವು ಆರ್.ಸಿ.ಸಿ. ಮನೆಯಲ್ಲಿ ಆಗಿರುತ್ತದೆ. ಸ್ಥಳವನ್ನು ಚಾಸಾ-1 ತೋರಿಸಿರುತ್ತಾರೆ. ಪೋಲಿಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಮತ್ತು ಛಾಯಾಚಿತ್ರ ತೆಗೆಸಿರುತ್ತಾರೆ. ಛಾಯಾಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-3 ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಿಪಿ-2ನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ನಿಪಿ-2ನ್ನು ಬರೆಯಲು ಕಳ್ಳತನವಾದ ಮನೆಯವರು ಹೇಳಿರಬಹುದು. ನಿಪಿ-2ರಲ್ಲಿ ಏನು ಬರೆದಿದೆ ಎನ್ನುವುದು ಈಗ ನೆನಪಿಲ್ಲ ಎಂದರೆ ಸರಿ. ನಿಪಿ-2ರ ಮೇಲಿನ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**